ಜಿಲ್ಲೆಗಳಲ್ಲೂ ಕೊಟ್ಟಿದ್ದೇನೆ. ಒಂದು ಜಿಲ್ಲೆಯನ್ನು ಬಿಟ್ಟಿಲ್ಲ; ಅವಶ್ಯಕತೆ ಇರುವವರೆಗೆ ಕೊಟ್ಟಿದ್ದೇವೆ.

ಅಧ್ಯಕ್ಷರು: ಆಯಿತು, ಮತ್ತೆ ಏಕೆ ಸಮಯವನ್ನು ವೇಸ್ಟ್ ಮಾಡುವುದು? ಇನ್ನು ಶ್ರೀ ಐವಾನ್ ನಿಗ್ಲಿಯವರು ಪ್ರಶ್ನೆಯನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾವು ಮಾನ್ಯ ಹೊರಟ್ಟಿಯವರ ಬಗ್ಗೆ ಗೌರವವನ್ನು ಇಟ್ಟುಕೊಂಡು, ವಿಶ್ವಾಸವನ್ನು ಇಟ್ಟುಕೊಂಡು, ಸ್ನೇಹವನ್ನು ಇಟ್ಟುಕೊಂಡು ಇದ್ದೇವೆ.

ಅಧ್ಯಕ್ಷರು: ಮಾನ್ಯ ಐವಾನ್ ನಿಗ್ಲಿಯವರು ಕೇಳಬೇಕು. ಈ ಪ್ರಶ್ನೆಯನ್ನು ಮುಕ್ತಾಯಗೊಳಿಸಿದ್ದೇನೆ. ದಯಮಾಡಿ ಎಲ್ಲರೂ ಸಹಕರಿಸಬೇಕು, ಈ ರೀತಿ ಎಲ್ಲರೂ ನಿಂತುಕೊಂಡು ಮಾತನಾಡುತ್ತಿದ್ದರೆ, ನಾನು ಪ್ರಶ್ನೋತ್ತರವನ್ನು ನಡೆಸುವುದಕ್ಕೆ ಕಷ್ಟ ಆಗುತ್ತದೆ. ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಐವಾನ್ ನಿಗ್ಲಿಯವರು ಕೇಳಬೇಕು. ದಯಮಾಡಿ ಪ್ರಶ್ನೋತ್ತರದಲ್ಲಿ ಎಲ್ಲಾ ಸದಸ್ಯರೂ ಮಾತನಾಡುವುದಕ್ಕೆ ಅವಕಾಶವಾಗುವುದಿಲ್ಲ. ದಯಮಾಡಿ ಎಲ್ಲರೂ ಕುಳಿತು ಕೊಳ್ಳಿ, ಬೇರೆ ಸಮಯದಲ್ಲಿ ಮಾತನಾಡಿ, ನೀವು ಒಂದು ಯಾವುದಾದರೂ ಸೂಚನೆಯನ್ನು ಕಳುಹಿಸಿ, ಈಗ ಶ್ರೀ ಐವಾನ್ ನಿಗ್ಲಿಯವರು ಕೇಳಲಿ, ಮಾನ್ಯ ವಾಟಾಳ್ ನಾಗರಾಜ್‌ರವರೇ, ಈ ಪ್ರಶ್ನೆ ಮುಗಿದಿದೆ, ತಾವು ಕುಳಿತುಕೊಳ್ಳಿ.

ವಿಷಯ:– ಆಂಗ್ಲ ಭಾರತೀಯ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ

226(1194) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಆಂಗ್ಲೋ ಇಂಡಿಯನ್ ಮಕ್ಕಳ ಶುಲ್ಕ ಮರುಪಾವತಿ ಯೋಜನೆ ಬಗ್ಗೆ ರೂ.3000/–ಕ್ಕೆ ಸರ್ಕಾರವು ನಿಗದಿಪಡಿಸಿದ್ದು ಈ ಬಗ್ಗೆ ಪೂರ್ತಿ ಶುಲ್ಕ ಮರುಪಾವತಿಯ ಬಗ್ಗೆ ಯಾವಾಗ ಪರಿಚಯಿಸಲಾಗುವುದು ;

ಆ) ಶುಲ್ಕ ಮರುಪಾವತಿಯನ್ನು ನಿಗಧಿಗೊಳಿಸಿರುವುದಕ್ಕೆ ಕಾರಣವೇನು ;

ಇ) 1987ರಲ್ಲಿ ಹೊರಡಿಸಲಾದ ಸರ್ಕಾರದ ಆದೇಶವನ್ನು ಕಡೆಗಣಿಸಲಾಗಿದೆಯೇ, ಹಾಗಿದ್ದಲ್ಲಿ, ಆಯವ್ಯಯ ನಿಗಧಿ ಪಡಿಸಲಾದಂತೆ ಪೂರ್ತಿಯಾಗಿ ಉಪಯೋಗವಾಗುತ್ತಿದೆಯೆ;

ಈ) ಈ ಬಗ್ಗೆ ಈಗಾಗಲೇ ಯಾವುದಾದರೂ ಸುತ್ತೋಲೆಯನ್ನು ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಶಾಲೆಗಳಿಗೂಸಹಮತಿಯೊಂದಿಗೆ ಶಾಲಾ ಮುಖ್ಯಸ್ಥರಿಗೂ ಪೋಷಕರಿಗೂ ಈ ಸೌಲಭ್ಯವನ್ನು ಉಪಯೋಗಿಸಲು ನೀಡಲಾಗಿದೆಯೇ;

ಉ) ನೀಡದಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದು ಕೊಂಡಿರುವ ಕ್ರಮದ ಬಗ್ಗೆ ಸಂಬಂಧಪಟ್ಟ ಸಮುದಾಯಕ್ಕೆ ಮತ್ತು ಶಾಲಾ ಮುಖ್ಯಸ್ಥರಿಗೆ ತಿಳಿಸಲಾಗಿದೆಯೇ?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಆಂಗ್ಲ ಸಮುದಾಯದ ವಿದ್ಯಾರ್ಥಿಗಳಿಗೆ ತಲಾ ರೂ.3000ಕ್ಕೆ ಶುಲ್ಕ ಮರುಪಾವತಿಗಾಗಿ ನಿಗಧಿಪಡಿಸಿದೆ.

ಅನುದಾನಿತ ಸರ್ಕಾರಿ ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ತಲಾ ರೂ.3000/– ದ ಶುಲ್ಕ ಮರುಪಾವತಿಯನ್ನು ಪಾವತಿಸಬೇಕಾಗುತ್ತದೆ.

ಆ) ಇಲ್ಲ. 1998ರಲ್ಲಿ ಹೊರಡಿಸಲಾದ ಸರ್ಕಾರದ ಆದೇಶದಂತೆ ನಿಗಧಿಪಡಿಸಲಾದ ರೂ.3000/– ಗಳನ್ನು ತಲಾ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.

ಇ) ಈ ಯೋಜನೆಯಲ್ಲಿ ಉಪಯೋಗ ಪಡೆಯುವ ಸಲುವಾಗಿ ಸುತ್ತೋಲೆಯಂತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸಮುದಾಯ ಮತ್ತು ಶಾಲಾ ಮುಖ್ಯಸ್ಥರಿಂದ ಪತ್ರಿಕಾ ಪ್ರಕಟಣೆ ಮತ್ತು ಸುತ್ತೋಲೆಯಂತೆ ಸೂಚನೆಗಳನ್ನು ಪಾಲಿಸುವಂತೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಐವಾನ್ ನಿಗ್ಲಿ: ಮಾನ್ಯ ಅಧ್ಯಕ್ಷರೆ, 1987–88ರಲ್ಲಿ ಶೇ.100 reimbursement ಕೊಡಬೇಕೆಂದು ಸರ್ಕಾರದ ಉತ್ತರವಾಗಿದೆ. ಈಗ ಅವರು ಉತ್ತರವನ್ನು ಕೊಟ್ಟಿದ್ದಾರೆ. No Government orders restricting the amount of reimbursement to Rs. 3,000/- per student has already been issued in 1998.

ಸರ್ಕಾರಕ್ಕೆ ಮನಸ್ಸು ಬಂದಾಗ full fee reimbursement - ಕೊಡುವುದು. ಆಮೇಲೆ ಅವರ ಮನಸ್ಸಿಗೆ ಬಂದಾಗ reimbursement ಕಡಿಮೆ ಮಾಡುವುದು. ಈಗ ಮೊನ್ನೆ ಸುಮಾರು ಸ್ಕೂಲ್‌ಗಳಿಂದ ನಮಗೆ ಲೆಟರ್ಸ್ ಬಂದಿದೆ. ಈ 3,000 ರೂಪಾಯಿಗಳನ್ನು ಕಟ್ ಮಾಡಿ 1,000 ರೂಪಾಯಿಗಳನ್ನು ಕೊಡುತ್ತಿದ್ದಾರೆ. I would like to request the Government. Why the Government has taken a decision to reduce the fee reimbursement of the Anglo-Indian students?

ಇಲ್ಲಿ 2002–03ನಲ್ಲಿ 514 ಮಕ್ಕಳ ಆಂಗ್ಲೋ ಇಂಡಿಯನ್ ಸ್ಟೂಡೆಂಟ್ಸ್ ಓದುತ್ತಿದ್ದರು. 2003–04ರಲ್ಲಿ ಅದು 272ಕ್ಕೆ ಕಡಿಮೆಯಾಗಿದೆ, ಮತ್ತೆ

2004–05ರಲ್ಲಿ 260 ಆಗಿದೆ. full fee reimbursement - ಕೊಡುತ್ತಿರುವ ಟೈಮ್‌ನಲ್ಲಿ, More than thousand Anglo-Indian students are studying. ನಮ್ಮದು ನೋಡಿ we are the micro minority, you know very well. I am to represent the Anglo-Indian community. The total amount which was given for Anglo-Indian students. ie., reimbursement is Rs.20 lakhs.

ಅದರಲ್ಲಿ 2002ರಲ್ಲಿ ರೂ. 8,15,639/– have been utilized.

ಬಾಕಿ ದುಡ್ಡು ಸರ್ಕಾರಕ್ಕೆ ವಾಪಸ್ಸು ಬಂದಿದೆ. 2003–04ನಲ್ಲಿ 272 ಮಕ್ಕಳು...

ಅಧ್ಯಕ್ಷರು: ಮಾನ್ಯ ಐವಾನ್ ನಿಗ್ಲಿಯವರೆ, ನೀವು ಪುಸ್ತಕವನ್ನು ಹಿಡಿದುಕೊಂಡು ಅಂಕಿಅಂಶಗಳನ್ನು ಕೊಡುವುದಕ್ಕೆ ಪ್ರಶ್ನೋತ್ತರ ಸಮಯದಲ್ಲಿ ಆಗುವುದಿಲ್ಲ. ನೀವು ಪ್ರಶ್ನೆಯನ್ನು ಸರಿಯಾಗಿ ಕೇಳಿ.

ಶ್ರೀ ಐವಾನ್ ನಿಗ್ಲಿ: ಮಾನ್ಯ ಅಧ್ಯಕ್ಷರೆ, ನಾವು ಯಾರ ಹತ್ತಿರ ಹೋಗಿ ಕೇಳಬೇಕು? Full fee reimbursement ಏಕೆ ಕಟ್ ಮಾಡಿದ್ದು? ಅವರಿಗೆ ಇಷ್ಟ ಬಂದಾಗ ಕೊಡುವುದು? ಅವರಿಗೆ ಇಷ್ಟ ಬಂದಾಗ ಕಡಿಮೆ ಮಾಡುವುದು, ಈಗ ಇದನ್ನು 1,000 ರೂಪಾಯಿಗಳಿಗೆ ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ನಾನು ಮತ್ತು ಐವಾನ್ ನಿಗ್ಲಿಯವರು ಸೇರಿ ಕಳುಹಿಸಿದ್ದೆವು. ಏನೋ mistake ಆಗಿದೆ.

ಅಧ್ಯಕ್ಷರು: ಈಗ ನನ್ನದು ಏನೆಂದರೆ, ಇವರು ಪ್ರಶ್ನೆಯನ್ನು ಕೇಳಲಿ, ಅದು ಬಿಟ್ಟು ಉದಾಹರಣೆಯನ್ನು ಕೊಟ್ಟು, ಎಲ್ಲಾ ಅಂಕಿಅಂಶಗಳನ್ನು ಕೊಟ್ಟು ಕೊಂಡು ಹೋದರೆ ಹೇಗೆ?

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾನ್ಯ ಐವಾನ್ ನಿಗ್ಲಿಯವರು ಇಬ್ಬರೂ ಸೇರಿಕೊಂಡು ಈ ಪ್ರಶ್ನೆಯನ್ನು ಕಳುಹಿಸಿದ್ದೆವು. ಅವರು ಇದನ್ನು ಸಬ್‌ಮಿಟ್ ಮಾಡುವಾಗ, ಮಿಸ್ಟೇಕ್ ಮಾಡಿಕೊಂಡು ಅವರ ಹೆಸರನ್ನು ಮಾತ್ರ ಹಾಕಿ ಕಳುಹಿಸಿ ಬಿಟ್ಟಿದ್ದಾರೆ. ಈ ಪ್ರಶ್ನೆ ಇರುವಂಥಾದ್ದು ಇಷ್ಟೆ, ಇವರು ಬಹಳ ಕಡಿಮೆ ಇರುವಂತಹ ಜನಸಂಖ್ಯೆ ಇರುವಂಥವರು. ಅವರಿಗೆ full reimbursement ಕೊಡುತ್ತಾ ಇದ್ದರು. ಅಷ್ಟೆಲ್ಲಾ reimbursement ಅನ್ನು ಕೊಟ್ಟರೂ ಅದು 30 ಲಕ್ಷ ರೂಪಾಯಿಗಳು ಆಗುತ್ತಿರಲಿಲ್ಲ. ಅದನ್ನು 3,000 ರೂಪಾಯಿಗಳಿಗೆ ಇಳಿಸಿದರು, ನಂತರ ಈಗ ಅದನ್ನು 1,000 ರೂಪಾಯಿಗಳಿಗೆ ಇಳಿಸಿದ್ದಾರೆ. ಈಗ ಅದರ ಪರಿಣಾಮ ಏನಾಗಿದೆಯೆಂದರೆ, 500 ಜನ ಮಕ್ಕಳು ಓದುತ್ತಿದ್ದಂಥವರು 200 ಮಕ್ಕಳಿಗೆ

ಬಂದಿದೆ. ಇದು ಏನೂ ದೊಡ್ಡ ಪ್ರಮಾಣದ ಹಣ ಅಲ್ಲ. ಆ ವರ್ಗದ ಜನರ ಹಿತರಕ್ಷಣೆಯನ್ನು ಮಾಡಬೇಕೆಂದು, ನಾವು ಅಲ್ಲಿ ಪಾರ್ಲಿಮೆಂಟ್‌ನಲ್ಲೂ ಒಬ್ಬ nominated member - ಅನ್ನು ಇಟ್ಟುಕೊಂಡಿದ್ದೇವೆ; ಇಲ್ಲೂ ಇಟ್ಟುಕೊಂಡಿದ್ದೇವೆ. ಇನ್ನು ಕೆಲವು ವರ್ಷಗಳಾದರೆ ಅವರು extinct species ಆಗುತ್ತಾರೆ. ಆ ವರ್ಗವೇ ಇರುವುದಿಲ್ಲ. ಆಗ ಸರ್ಕಾರಕ್ಕೆ 20 ಲಕ್ಷ ರೂಪಾಯಿಗಳು ಏನೂ ದೊಡ್ಡ ಹೊರೆಯಾಗುವುದಿಲ್ಲ. ಈ ಮೊದಲಿನ ಸ್ಥಿತಿ ಏನು ಇತ್ತು? 100% reimbursement ಅದನ್ನು ಮಾಡಿದರೆ, ನಿಮಗೆ ಪುಣ್ಯ ಬರುತ್ತದೆಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಹೊರಟ್ಟಿ: ಮಾನ್ಯ ಅಧ್ಯಕ್ಷರೆ, ಇದು ಏನಾಗಿದೆಯೆಂದರೆ, ಮೊದಲಿಗೆ ಎಲ್ಲಾ ಸಂಪೂರ್ಣವಾಗಿ ಹಣವನ್ನು reimbursement ಮಾಡುವಂತಹ ಪದ್ಧತಿ ಇತ್ತು. ಇದು ಬರು ಬರುತ್ತಾ ಏನಾಯಿತೆಂದರೆ, CBSE, ICSE school ಗಳಿಗೆ ಹೋಗಿ, ಒಬ್ಬ ವಿದ್ಯಾರ್ಥಿಗೆ 12,000, 13,000 ರೂಪಾಯಿಗಳು ಬರುವಂಥಾದ್ದು ಅಂಕಿ ಸಂಖ್ಯೆಗಳಲ್ಲಿ ಬಂತು. ಅದಕ್ಕೆ 1998ರಲ್ಲಿ ಒಂದು ಕಾನೂನನ್ನು ಮಾಡಿ, ಇವರಿಗೆ ಮ್ಯಾಗ್ಜಿಮಮ್ 3,000 ರೂಪಾಯಿಗಳನ್ನು ಕೊಡಬೇಕೆಂದು ಆಯಿತು, ಅದಕ್ಕಿಂತ ಕಡಿಮೆ ಮಾಡಬಾರದೆಂದು ಆಯಿತು. ಲಾಸ್ಟ್ ಟೈಮ್‌ನಲ್ಲಿ, ಈ ಒಂದು ವರ್ಷ 1,000 ರೂಪಾಯಿಗಳನ್ನು ಕೊಟ್ಟಿರುವಂಥಾದ್ದು ತಪ್ಪು ಆಗಿದೆ. ಇದನ್ನು ಸರಿಪಡಿಸಿ, ಯಾರ್ಯಾರಿಗೆ ಅಲ್ಲಿ ಅನ್ಯಾಯವಾಗಿದೆ, ಅವರಿಗೆ ಈ ಸಲ ಕೊಡುವಂತಹ ವ್ಯವಸ್ಥೆಯ ಮಾಡಲು ಆಗಲೇ ಹೇಳಿದ್ದೇನೆ, ಅದನ್ನು ನಾನು ಮಾಡುತ್ತೇನೆ. ಮತ್ತೆ ಈ 3,000 ರೂಪಾಯಿಗಳು ಏನು ಇದೆ, ಅದನ್ನು ಕಡಿಮೆ ಮಾಡುವುದಿಲ್ಲ. ಮೊದಲು ಫೀಜ್ ಕಡಿಮೆ ಇರುತ್ತಿತ್ತು, ಆಗ 3,000, 4,000 ಆಗುತ್ತಿತ್ತು ಕೊಡುತ್ತಿದ್ದೆವು. ಈಗ 12,000, 15,000, 16,000 ರೂಪಾಯಿಗಳ reimbursement application ಗಳು ಬಂದವು. ಹಾಗೆ ಬಂದಾಗ ಅಧಿಕಾರಿಗಳು ಎಲ್ಲಾ ಕುಳಿತುಕೊಂಡು ಚರ್ಚೆ ಮಾಡಿ, ಇದನ್ನು 3,000 ರೂಪಾಯಿಗಳು ಕೊಡಬೇಕೆಂದು ಆಯಿತು. ಇದರಲ್ಲಿ ತಪ್ಪು ಏನು ಮಾಡಿದ್ದಾರೆಂದರೆ, ಇದೆಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಕಳುಹಿಸಿ ಬಿಟ್ಟಿದ್ದಾರೆ. ಜಿಲ್ಲಾ ಪಂಚಾಯತ್‌ಗಳೆಂದರೆ, ಧಾರವಾಡ, ಗುಲ್ಬರ್ಗಾ, ಇಲ್ಲಿ ಇವರು ಒಬ್ಬರು ಸಿಗುತ್ತಾರೆ, ಅಷ್ಟೆ. ಬೆಂಗಳೂರಿನಲ್ಲಿ 400ಜನರು, 300ಜನರು ಸಿಗುತ್ತಾರೆ. ಅದಕ್ಕೆ ನಾವು ಏನು ಮಾಡಿದ್ದೆವೆಂದರೆ ಎಲ್ಲೆಲ್ಲಿ ವಿದ್ಯಾರ್ಥಿಗಳು ಹೆಚ್ಚು ಇದ್ದಾರೆ, ಅಲ್ಲಿ ಎಲ್ಲಾ ಹಣವನ್ನು ತಂದು, ಇಲ್ಲಿ ಕೊಡಬೇಕೆಂದು ಮಾಡಿದ್ದೇನೆ. ಅವರಿಗೆಲ್ಲಾ

ಕೊಡಬೇಕೆಂದು ಆಜ್ಞೆಯನ್ನು ಮಾಡಿದ್ದೇನೆ. ಇನ್ನು ಮುಂದಿನ ದಿವಸಗಳಲ್ಲಿ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಈಗ 3,000 ರೂಪಾಯಿಗಳನ್ನು ಕೊಡುತ್ತೇವೆ. ಈಗ ಹೆಚ್ಚು ಕಡಿಮೆಯಾಗಿ ಅವರಿಗೆ ಏನು 1,000 ರೂಪಾಯಿಗಳು ಸಿಕ್ಕಿದೆ, ಅವರಿಗೂ 3,000 ರೂಪಾಯಿಗಳನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಧನ್ಯವಾದಗಳು. I am thankful to you.

ಅಧ್ಯಕ್ಷರು: ಆಯಿತು, ಇನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿ.

ಶ್ರೀ ಐವಾನ್ ನಿಗ್ಲಿ; ಮಾನ್ಯ ಅಧ್ಯಕ್ಷರೆ, 3,000 ರೂಪಾಯಿಗಳನ್ನು ಕೊಟ್ಟರೆ ಏನು ಮಾಡುವುದಕ್ಕೆ ಆಗುತ್ತದೆ? ಶೇ.100ನಷ್ಟು ರಿಯಾಂಬರ್ಸ್‌ಮೆಂಟ್ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಕೊಟ್ಟಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಪ್ರಶ್ನೆಯನ್ನು ಕೇಳಿ.

ಚಾಮರಾಜನಗರ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಆಶ್ರಯ ಮನೆಗಳು

227(1412) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವೆ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯ ನಗರ ಪ್ರದೇಶಗಳಲ್ಲಿ ಹೊಸದಾಗಿ ಆಶ್ರಯ ಮನೆಗಳನ್ನು ಸರ್ಕಾರ ನೀಡುತ್ತಿದೆಯೆ ;

ಆ) ಹಾಗಿದ್ದಲ್ಲಿ, ಯಾವ ನಿಯಮಗಳನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ;

ಇ) ಈ ಫಲಾನುಭವಿಗಳನ್ನು ಆಶ್ರಯ ಸಮಿತಿಯ ಮುಖಾಂತರ ಹಂಚಿಕೆ ಮಾಡಲಾಗುವುದೇ ಅಥವಾ ಪುರಸಭಾ ವ್ಯಾಪ್ತಿಗೆ ವಹಿಸಲಾಗುವುದೆ ;

ಈ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರಕ್ಕೆ ಎಷ್ಟು ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗಿದೆ ;

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) –

ಅ) ಚಾಮರಾಜನಗರ ಜಿಲ್ಲೆಯಡಿ ಬರುವ ನಗರ ಪ್ರದೇಶಗಳಿಗೆ ಪ್ರತಿ ವರ್ಷ ನಗರ ಆಶ್ರಯ ಯೋಜನೆಯಡಿ ಮನೆಗಳನ್ನು ನೀಡಲಾಗುತ್ತಿದ್ದು ಅದರಂತೆ 2005-06ನೇ ಸಾಲಿಗೆ 855 ಮನೆಗಳ ಗುರಿಯನ್ನು ನೀಡಲಾಗಿದ್ದು ಈ ಮನೆಗಳನ್ನು ಪ್ರಸಕ್ತ ಸಾಲಿನಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.